ಅ) ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) ಖರೀದಿ ಪ್ರಕ್ರಿಯೆಯು ಪ್ರಾರಂಭಗೊಂಡಿದೆ.

ಆ) ಅನ್ವಯಿಸುವುದಿಲ್ಲ.

ಏಳನೇ ತರಗತಿ ಪಬ್ಲಿಕ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ತಯಾರಿಕೆ

734 - ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಏಳನೇ ತರಗತಿ ಪಬ್ಲಿಕ್ ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲು ಹೊರಡಿಸಿರುವ ಮಾರ್ಗ ಸೂಚನೆಗಳೇನು?

ಆ) ಈ ಮಾರ್ಗ ಸೂಚನೆಗಳನ್ನು ಬಳ್ಳಾರಿ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ಕಟ್ಟುನಿಟ್ಟಾಗಿ ಪಾಲಿಸಿದ್ದಾರೆಯೇ ಹಾಗಿಲ್ಲದಿದ್ದಲ್ಲಿ ಸರ್ಕಾರವು ಇವರ ಮೇಲೆ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಶ್ನೆ ಪತ್ರಿಕೆ ತಯಾರಿಸುವ ವಿಷಯವು ಅತ್ಯಂತ ಗುರುತರವಾದ ಜವಾಬ್ದಾರಿಯಾಗಿರುತ್ತದೆ. ಏಳನೇ ತರಗತಿ ಪರೀಕ್ಷೆಯ ಕಾರ್ಯದರ್ಶಿಗಳ ಮೇಲ್ವಿಚಾರಣೆಯಲ್ಲಿ ರಹಸ್ಯವಾದ ಸ್ಥಳದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸುವುದು ಹಾಗೂ ಮುದ್ರಿಸುವುದು ಕಾರ್ಯದರ್ಶಿಗಳಿಗೆ ಹೆಚ್ಚಿನ ಜವಾಬ್ದಾರಿಯಾಗಿದ್ದು ಇದರ ಗೋಪ್ಯತೆಯನ್ನು ಕಾಪಾಡತಕ್ಕದ್ದು. ಉಪನಿರ್ದೇಶಕರು ಹಾಗೂ ಅಧ್ಯಕ್ಷರು, ಆ ಜಿಲ್ಲೆಯ ವಿದ್ಯಾರ್ಥಿಗಳ ಸಂಖ್ಯೆಗೆ ಅಗತ್ಯಕ್ಕೆ ತಕ್ಕಂತೆ ಪ್ರಶ್ನೆ ಪತ್ರಿಕೆಗಳನ್ನು ನಿಯಮಾನುಸಾರ ಮುದ್ರಿಸಿ ಕಾರ್ಯದರ್ಶಿಗಳಿಗೆ ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಲೀ ಕಾರ್ಯದರ್ಶಿಗಳಾಗಲೀ, ಪ್ರಶ್ನೆಪತ್ರಿಕೆ ತಯಾರಕರನ್ನು ನೇಮಿಸುವ ಮೊದಲು ಕೆಳಕಾಣಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

1) ಕಟ್ಟುನಿಟ್ಟಾದ ರಹಸ್ಯತೆಯನ್ನು ಕಾಪಾಡುವಂತಹ ದಕ್ಷ ಮತ್ತು ಪ್ರಾಮಾಣಿಕ 5 ವರ್ಷ ಅನುಭವವುಳ್ಳ ನುರಿತ ಏಳನೇ ತರಗತಿಯಲ್ಲಿ ಅಯಾ ವಿಷಯವನ್ನು ಬೋಧಿಸುತ್ತಿರುವ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

2) ಪ್ರಶ್ನೆ ಪತ್ರಿಕೆಗಳನ್ನು ಕಾರ್ಯದರ್ಶಿಗಳ ಸಮ್ಮುಖದಲ್ಲಿಯೇ ಕೊಟ್ಟಿರುವ ಪಠ್ಯಕ್ರಮ (ಸಿಲಿಬಸ್) ಪ್ರಕಾರ ಹಾಗೂ ಮಾದರಿ ಪ್ರಶ್ನೆ ಪತ್ರಿಕೆಗಳಂತೆ ತಯಾರಿಸಬೇಕು. ಇದರ ಬಗ್ಗೆ ಒಂದು ನೀಲಿ ನಕ್ಷೆಯನ್ನು ಈ ಬಗ್ಗೆ ನೀಡಲಾದ ತಾಂತ್ರಿಕ ಸೂಚನೆಗಳಂತೆ,ಮಾಡಿಕೊಳ್ಳುವುದು. ನಂತರ ಪ್ರಶ್ನೆಗಳನ್ನು ತಯಾರಿಸುವುದು.

3) ಪ್ರಶ್ನೆ ಪತ್ರಿಕೆ ತಯಾರಕರ ಹತ್ತಿರ ಸಂಬಂಧದ ಏಳನೇ ತರಗತಿ ಪರೀಕ್ಷೆಗೆ ಹೋಗುವ ಮಕ್ಕಳಿರಕೂಡದು. ಇದು ಒಂದು ಅನರ್ಹತಾ ಷರತ್ತು ಆಗಿರುತ್ತದೆ.

4) ಪ್ರಶ್ನೆ ಪತ್ರಿಕೆಗಳನ್ನು ಬೇರೆ ಬೇರೆ ಮೂರು ಸೆಟ್‌ಗಳನ್ನು ತಯಾರಿಸಿ ಮೂರಕ್ಕೂ ಮಾದರಿ ಉತ್ತರಗಳನ್ನು ಬರೆಯತಕ್ಕದ್ದು. ಅವುಗಳಿಗೆ ಅಂಕಗಳು ಎಷ್ಟು? ಎಂದು ಸಹ ನಿಗದಿಗೊಳಿಸತಕ್ಕದ್ದು.

5) ಪ್ರತಿಯೊಂದು ಪ್ರಶ್ನೆಗೂ ತಪ್ಪದೇ ಅಂಕಗಳನ್ನು ಕೆಂಪು ಶಾಯಿಯಲ್ಲಿ ಬರೆದು ಇವುಗಳು ಒಟ್ಟು ಗರಿಷ್ಠ ಅಂಕಗಳಿಗೆ ಸರಿಹೋಗುವಂತೆ ಪರಿಶೀಲಿಸತಕ್ಕದ್ದು.

6) ಪ್ರಶ್ನೆಯನ್ನು ತಯಾರಿಸುವಾಗ ವಿದ್ಯಾರ್ಥಿಗಳ ಮಟ್ಟವನ್ನು ಅರಿತು ಅವರಿಗೆ ಅರ್ಥವಾಗುವಂತೆಯೂ ಸುಲಭವಾಗಿ ಉತ್ತರಗಳನ್ನು ಬರೆಯುವಂತೆಯೂ ತಯಾರಿಸತಕ್ಕದ್ದು. ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲೂ ಗೊಂದಲ ವಾಗದಂತಿರತಕ್ಕದ್ದು. ಪ್ರಾರಂಭದಲ್ಲಿ ಸುಲಭವಾದ ಪ್ರಶ್ನೆಗಳನ್ನು ಕೊಡುವುದು.

7) ಯಾವುದೇ ಅಧ್ಯಾಯ ಅಥವಾ ಪಾಠದಿಂದಲೇ ಹೆಚ್ಚು ಪ್ರಶ್ನೆಗಳನ್ನು ತಯಾರಿಸಬಾರದು. ಪ್ರಶ್ನೆಗಳನ್ನು ಎಲ್ಲಾ ಭಾಗ:ಪಾಠಗಳಿಂದಲೂ ತೆಗೆದುಕೊಳ್ಳಬೇಕು.

8) ಯಾವ ಹೆಚ್ಚು ಕಡಿಮೆಗೂ ಜವಾಬ್ದಾರಿ ಕಾರ್ಯದರ್ಶಿಗಳದ್ದೇ ಆಗಿರುವುದರಿಂದ ಯಾವ ರೀತಿಯ ಆಕ್ಷೇಪಣೆಗೂ ದೂರಿಗೂ ತೊಂದರೆಗೂ ಅವಕಾಶ ಕೊಡದಂತೆ ಈ ಕಾರ್ಯವನ್ನು ಮಾಡಿಸಬೇಕು.

9) "ಪ್ರಶ್ನೆ ಪತ್ರಿಕೆಗಳನ್ನು ನಿಗದಿತ ಪಠ್ಯಕ್ರಮದಂತೆ ತಯಾರಿಸಲಾಗಿದೆ ಮತ್ತು ಯಾವುದೇ ಪ್ರಶ್ನೆಗಳು ಪಠ್ಯಕ್ರಮದ ಹೊರಗಿರುವುದಿಲ್ಲ ಎಂಬುದನ್ನು ಹಾಗೂ ಎಲ್ಲ ಪ್ರಶ್ನೆಗಳು ಪಠ್ಯಪುಸ್ತಕದ ಆಧಾರದ ಮೇಲೆಯೇ ಕೊಡಲಾಗಿದೆ" ಎಂಬ ದೃಢೀಕರಣವನ್ನು ಪ್ರತಿಯೊಬ್ಬ ಪ್ರಶ್ನೆ ಪತ್ರಿಕಾ ತಯಾರಕರಿಂದ ಪಡೆಯಬೇಕು.

ಆ) ಕಟ್ಟುನಿಟ್ಟಾಗಿ ಮಾರ್ಗ ಸೂಚಿಯನ್ನು ಪಾಲಿಸಿರುತ್ತಾರೆ.

ಅರಣ್ಯ ಇಲಾಖೆಯ ಬಗರ್ ಹುಕುಂ ಭೂಮಿಯ ಸಕ್ರಮ

736 - ಶ್ರೀ ಬಿ. ಶಿವರಾಮ್ (ಗಂಡಸಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

1) ಅರಣ್ಯ ಇಲಾಖೆಯ ಬಗರ್ ಹುಕುಂ ಭೂಮಿಯ ಸಕ್ರಮಣಕ್ಕೆ ಸರ್ಕಾರ ಸಮಿತಿ ರಚಿಸಿದೆಯೇ ?ರಚಿಸಿಲ್ಲದಿದ್ದರೆ ಯಾವಾಗ ರಚಿಸಲಾಗುವುದು ?

2) ಭೂ ಸಕ್ರಮಣಕ್ಕೆ ಕಾಲ ನಿಗದಿ ಏನಾದರೂ ಸರ್ಕಾರ ನಿಗದಿಪಪಡಿಸಿದೆಯೆ ?